# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1193 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23-12-2021 |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7ಎ ಸನ್ನದುಗಳನ್ನು ಪಡೆಯಲು ಇರುವ ನಿಯಮಗಳು ಯಾವುವು; ಮತ್ತು ಇಲಾಖೆಯಿಂದ ವಿಧಿಸಲಾಗುವ ಸಾಮಾನ್ಯ ಷರತ್ತುಗಳು ಯಾವುವು; | ರಾಜ್ಯದಲ್ಲಿ ಈ ಕೆಳಕಂಡ ನಿಯಮಗಳನ್ನು ಪಾಲಿಸಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7ಎ ಸನ್ನದನ್ನು ನೀಡಲಾಗುತ್ತಿದೆ.<br>1) ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರಡಿಯಲ್ಲಿನ ನಿಯಮಗಳಲ್ಲಿ ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳು ಮತ್ತು ಕರ್ನಾಟಕ ಅಬಕಾರಿ ಸನ್ನದುಗಳು (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರಲ್ಲಿನ ನಿಯಮಗಳಡಿ ರೂಪಿಸಿರುವ ನಿರ್ಬಂಧಗಳು.<br>2) ಸರ್ಕಾರದ ಆದೇಶ ಸಂಖ್ಯೆ:ಆಇ 36 ಇಡಬ್ಲ್ಯೂಪಿ 2018, ದಿನಾಂಕ:06-08-2020 ರಲ್ಲಿ 2011 ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/12/2021 11:37 AM

| | | |
|---|---|---|
| | | ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಲಾಗಿರುತ್ತದೆ.<br>3) ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರನ್ವಯ ಸಿಎಲ್-6ಎ ಸ್ಟಾರ್ ಹೋಟೆಲ್ ಸನ್ನದುಗಳನ್ನು ಜಿಲ್ಲಾಧಿಕಾರಿಗಳಿಂದ ಫಾರಂ-6ಎ ರಲ್ಲಿ ಮದ್ಯವನ್ನು ಹೊಂದುವಿಕೆ ಹಾಗೂ ಮಾರಾಟಕ್ಕಾಗಿ ನೀಡಲಾಗುತ್ತದೆ. ಸನ್ನದುದಾರರು ಸನ್ನದಿನಲ್ಲಿ ತಂಗಿರುವ ಗ್ರಾಹಕರುಗಳ ರೂಂಗೆ ಮದ್ಯವನ್ನು ನೀಡಬಹುದಾಗಿರುತ್ತದೆ. ಸಿಎಲ್-6ಎ ಸನ್ನದಿನಲ್ಲಿ ಒಂದಕ್ಕಿಂತ ಹೆಚ್ಚಿನ ಮದ್ಯದ ಕೌಂಟರ್ ಗಳನ್ನು ಜಿಲ್ಲಾಧಿಕಾರಿಗಳ ಅನುಮತಿಯೊಂದಿಗೆ ತೆರೆಯಬಹುದಾಗಿರುತ್ತದೆ. ಸ್ಟಾರ್ ಹೋಟೆಲ್ ಅಂದರೆ ಸಿಎಲ್-6ಎ ಸನ್ನದು ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ಮಾನ್ಯತೆ ಪಡೆದಿರಬೇಕಾಗಿರುತ್ತದೆ.<br>4) ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರನ್ವಯ ಅಬಕಾರಿ ನಿಯಮಗಳ ಪ್ರಕಾರ ಸಿಎಲ್(7-ಎ) ಸನ್ನದನ್ನು ರಾಜ್ಯ ಇಲ್ಲವೇ ಕೇಂದ್ರ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಗಳಿಗೆ ಮಾತ್ರ ನೀಡಲು ಅವಕಾಶವಿರುತ್ತದೆ. ಸಿಎಲ್(7-ಎ) ಟೂರಿಸ್ಟ್ ಹೋಟೆಲ್ ಸನ್ನದುಗಳನ್ನು ಜಿಲ್ಲಾಧಿಕಾರಿಗಳು ಫಾರಂ-ಸಿಎಲ್14 ರಲ್ಲಿ ಮದ್ಯವನ್ನು ಹೊಂದುವಿಕೆ ಹಾಗೂ ಮಾರಾಟಕ್ಕಾಗಿ ನೀಡಲಾಗುತ್ತಿದೆ. |
| ಆ) | ಸರ್ಕಾರದಿಂದ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7ಎ ಸನ್ನದುಗಳನ್ನು ಪಡೆಯಲು | ಸರ್ಕಾರದಿಂದ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7ಎ ಸನ್ನದುಗಳನ್ನು ಪಡೆಯಲು ಕರ್ನಾಟಕ ಅಬಕಾರಿ (ಸನ್ನದುಗಳ |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/12/2021 11:37 AM

| | | |
|---|---|---|
| | ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5 ಕ್ಕೆ ತಿದ್ದುಪಡಿಯನ್ನು ತರಲಾಗಿದೆಯೇ; ಈ ಕುರಿತು ಕರಡು ಪ್ರತಿಯನ್ನು ಹೊರಡಿಸಿ ಆಕ್ಷೇಪಣೆಯನ್ನು ಆಹ್ವಾನಿಸಲಾಗಿದೆಯೇ; (ಹೌದಾದಲ್ಲಿ ಕರಡು ಪ್ರತಿಯನ್ನು ಒದಗಿಸುವುದು) | ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5 ಕ್ಕೆ ತಿದ್ದುಪಡಿ ತಂದಿರುವುದಿಲ್ಲ ಹಾಗೂ ಕರಡು ಪ್ರತಿಯನ್ನು ಹೊರಡಿಸಿರುವುದಿಲ್ಲ. |
| ಇ) | ಈ ನಿಯಮಕ್ಕೆ ತಿದ್ದುಪಡಿಯನ್ನು ತರದೇ ಸಿಎಲ್-6ಎ, ಮತ್ತು ಸಿಎಲ್-7ಎ ಸನ್ನದುಗಳನ್ನು ನೀಡಲಾಗಿದೆಯೇ; ಹೌದಾದಲ್ಲಿ, ಯಾವ ಆಧಾರದ ಮೇಲೆ ನೀಡಲಾಗಿದೆ; | ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:23.02.2018ರ ತೀರ್ಪಿನಲ್ಲಿ ನೀಡಿರುವ ನಿರ್ದೇಶನದಂತೆ Urban Agglomeration ಇರುವ ಸಾಮಿಪ್ಯ ಮತ್ತು ಸಾಕಷ್ಟು ಅಭಿವೃದ್ಧಿ ಈ ಎರಡು ಮಾನದಂಡಗಳ ಅನುಸಾರ ಆಯಾ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ:ಆಇ 36 ಇಡಬ್ಲ್ಯೂಪಿ 2018, ದಿನಾಂಕ:31.08.2018ರಲ್ಲಿ "ಸಾಕಷ್ಟು ಅಭಿವೃದ್ಧಿ" ಪರಿಭಾಷೆಯಲ್ಲಿ 2011ರ ಜನಗಣತಿಯನ್ವಯ 5,000ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸನ್ನದುಗಳಿಗೆ ವಿನಾಯಿತಿಯನ್ನು ನೀಡಲಾಗಿರುತ್ತದೆ.<br><br>ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಆಇ 36 ಇಡಬ್ಲ್ಯೂಪಿ 2018, ದಿನಾಂಕ:06.08.2020ರಲ್ಲಿ 2011 ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿರುತ್ತದೆ. |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/12/2021 11:37 AM

| | | |
|---|---|---|
| ಈ) | ಉಡುಪಿ ಜಿಲ್ಲೆಯಲ್ಲಿರುವ ಸಿಎಲ್‌-6ಎ, ಮತ್ತು ಸಿಎಲ್‌-7ಎ ಸನ್ನದುದಾರರ ಸಂಖ್ಯೆ ಎಷ್ಟು; ಕಳೆದ 2 ವರ್ಷಗಳಿಂದ ಹೊಸದಾಗಿ ನೀಡಲಾದ ಸಿಎಲ್‌-6ಎ, ಮತ್ತು ಸಿಎಲ್‌-7ಎ ಸನ್ನದುದಾರರ ಸಂಖ್ಯೆ ಎಷ್ಟು? (ಸನ್ನದುದಾರುವಾರು ತಾಲ್ಲೂಕುವಾರು ವಿವರ ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಇಂದಿನವರೆವಿಗೂ ಯಾವುದೇ ಸಿಎಲ್‌-6ಎ ಮತ್ತು ಸಿಎಲ್‌-7ಎ ಸನ್ನದು ಮಂಜೂರಾಗಿರುವುದಿಲ್ಲ. |

ಆಇ 142 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/12/2021 11:37 AM